# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಬಿಜಾಪೂರ ಜಿಲ್ಲೆಯ ಕೃಷಿ ಇಲಾಖೆಯಲ್ಲಿ ವಿವಿಧ ಯೋಜನೆಗಳ ಅನಷ್ಠಾನದ ಪರಿಕರಗಳನ್ನು ಪೂರೈಸುವಲ್ಲಿ ಲೋಪ ಎಸಗಿದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ.

*****

ಓದಲಾಗಿದೆ:-

ಜಂಟಿ ಕೃಷಿ ನಿರ್ದೇಶಕರು (ವಿಷಯ ತಜ್ಞ), ಕೃಷಿ ಆಯುಕ್ತರ ಕಚೇರಿ, ಬೆಂಗಳೂರು ಹಾಗೂ ನೋಡಲ್ ಅಧಿಕಾರಿ ವಿಜಾಪೂರ ಇವರ ಪತ್ರ ಸಂ. ಜಂಕೃನಿ/ವಿತ/ಬಿ.ಪ್ರ.ಪಿ/2011-12, ದಿನಾಂಕ: 28-12-2011

ಪ್ರಸ್ತಾವನೆ:-

ಕೃಷಿ ನಿರ್ದೇಶನಾಲಯದ ಜಂಟಿ ಕೃಷಿ ನಿರ್ದೇಶಕರು, (ವಿಷಯ ತಜ್ಞ) ಮತ್ತು ಬಿಜಾಪೂರ ಜಿಲ್ಲೆಯ ನೋಡೆಲ್ ಅಧಿಕಾರಿಗಳು ತಮ್ಮ ತನಿಖಾ ತಂಡದೊಂದಿಗೆ ದಿನಾಂಕ: 26-12-2011ರಂದು ವಿಜಾಪೂರ ತಾಲ್ಲೂಕು ಮತ್ತು ತಿಕೋಟಾ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ಬಿಜಾಪೂರ ಜಿಲ್ಲೆಯ ಕೃಷಿ ಇಲಾಖೆಯಲ್ಲಿ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಪರಿಕರಗಳನ್ನು ರೈತರಿಗೆ ಸಮರ್ಪಕವಾಗಿ ವಿತರಿಸಿರುವ ಬಗ್ಗೆ ಮತ್ತು ಯೋಜನೆಗಳನ್ನು ಅನುಷ್ಠಾನಗೊಳಸಿರುವ ಬಗ್ಗೆ ತಪಾಸಣೆ ನಡೆಸಿ,ಮೇಲೆ ಓದಲಾಗಿರುವ ದಿನಾಂಕ: 28-12-2011ರಂದು ಕೃಷಿ ನಿರ್ದೇಶಕರಿಗೆ ನೀಡಿರುವ ವರದಿಯಲ್ಲಿ, ಜಂಟಿ ಕೃಷಿ ನಿರ್ದೇಶಕರು, ಬಿಜಾಪೂರವರು, ನೀಡಿದ ಬೇಡಿಕೆಯನುಸಾರ ಪರಿಕರಗಳ ಸರಬರಾಜು ಮತ್ತು ವಿತರಣೆಗೆ ಸಂಬಂಧಿಸಿದ ನಿರ್ವಹಿಸಿದ ದಾಖಾಲಾತಿಗಳಲ್ಲಿ ನ್ಯೂನತೆ ಇರುವುದು ಕಂಡು ಬಂದಿರುತ್ತದೆ. ಹಾಗಾಗಿ ಪರಿಕರಗಳು ಫಲಾನುಭಿವಿಗಳಗೆ ಸರಿಯಾಗಿ ಸರಬರಾಜು ಮತ್ತು ವಿತರಣೆಯಾಗಿರುವ ಬಗ್ಗೆ ಸಂಶಯಾಸ್ಪದವಾಗಿದ್ದು, ಸದರಿ ನ್ಯೂನೆಗಳ ಬಗ್ಗೆ ವಿವರಣೆ ಮತ್ತು ಸಮಜಾಯಿಸಿ ನೀಡುವಲ್ಲಿ ಜಂಟಿ ಕೃಷಿ ನಿರ್ದೇಶಕರು ಬಿಜಾಪೂರ, ಸಹಾಯಕ ಕೃಷಿ ನಿರ್ದೇಶಕರು, ಬಿಜಾಪೂರ, ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ತಿಕೋಟಾ, ಮತ್ತು ಸದರಿ ಕೇಂದ್ರದ ತಾಂತ್ರಿಕ ಸಹಾಯಕರು ವಿಫಲರಾಗಿರುತ್ತಾರೆಂದು, ವರದಿ ನೀಡಿರುತ್ತಾರೆ. ಸದರಿ ಪರಿಶೀಲನಾ ವರದಿಯನ್ನು ಅವಗಾಹಿಸಲಾಗಿ, ಬಿಜಾಪೂರ ಜಂಟಿ ಕೃಷಿ ನಿರ್ದೇಶಕರು, ವಿವಿಧ ಯೋಜನೆಗಳಲ್ಲಿರುವ ಘಟಕಗಳಿಗೆ ಬೇಡಿಕೆ ಪತ್ರ ನೀಡಿರುವುದರನ್ವಯ ಸಹಾಯಕ ಕೃಷಿ ನಿರ್ದೇಶಕರು, ಸಂಬಂಧಿಸಿದ ಸರಬರಾಜುದಾರರಿಂದ ಬಿಲ್ಲನ್ನು ಪಡೆದು, ಸರ್ಕಾರಿ ಸಹಾಯ ಧನವನ್ನು ಒದಗಿಸಿರುವುದಕ್ಕೆ ಮತ್ತು ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಬಂದಿರುವ ಪರಿಕರಗಳನ್ನು ವಿತರಿಸಿರುವುದಕ್ಕೆ ಸೀಮಿತಗೊಂಡಿರುತ್ತಾರೆ. ಇಲಾಖಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ನೀಡಿದ ಬೇಡಿಕೆಯನ್ವಯ ಪರಿಕರಗಳು ಸರಬರಾಜು ಆಗಿವೆಯೇ? ಎಂಬುದನ್ನು

ಮುಂದಿನ ಪುಟಕ್ಕೆ...

48

ಖಾತರಿಪಡಿಸಿಕೊಳ್ಳುವ ಮುನ್ನವೇ ಸಹಾಯಧನವನ್ನು ಪಾವತಿಸಲಾಗಿರುತ್ತದೆ. ಜಂಟಿ ಕೃಷಿ ನಿರ್ದೇಶಕರು ನೀಡಿದ ಬೇಡಿಕೆಯಂತೆ ಸರಬರಾಜು ಆಗಿರುವ ಪರಿಕರಗಳನ್ನು ವಿತರಿಸಿರುವ ಬಗ್ಗೆ ಮತ್ತು ಸರಬರಾಜು ಮಾಡಿರುವ ಬಗ್ಗೆ ದಾಸ್ತಾನು ಪುಸ್ತಕಗಳಲ್ಲಿನಮೂದಿಸದೇ ಇರುವುದು ಕಂಡು ಬಂದಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಜಂಟಿ ಕೃಷಿ ನಿರ್ದೇಶಕರು, ಬಿಜಾಪುರ ಸಹಾಯಕ ಕೃಷಿ ನಿರ್ದೇಶಕರು, ವಿಜಾಪೂರ, ತಾಂತ್ರಿಕ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಬಿಜಾಪೂರ ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ ತಿಕೋಟಾ ಮತ್ತು ಅಲ್ಲಿನ ತಾಂತ್ರಿಕ ಸಹಾಯಕರವರು ಕಾರಣರಾಗಿರುತ್ತಾರೆಂದು ವರದಿ ನೀಡಿರುತ್ತಾರೆ.

ಮೇಲ್ಕಂಡ ವರದಿಯನ್ನು ಪರಿಶೀಲಿಸಲಾಗಿ, ಸದರಿ ಅಧಿಕಾರಿಗಳಿಂದ ಫಲಾನುಭವಿಗಳಿಗೆ ಕೃಷಿ ಪರಿಕರಗಳ ವಿತರಣೆಯಲ್ಲಿ ಲೋಪವಾಗಿರುವುದು ಕಂಡು ಬಂದಿರುವುದರಿಂದ ಅವರುಗಳನ್ನು ಅವರ ಮೇಲಿನ ಇಲಾಖಾ ವಿಚಾರಣೆ ಬಾಕಿ ಇರಿಸಿ, ಅಮಾನತ್ತಿನಲ್ಲಿರಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

<u>ಆದೇಶ ಸಂಖ್ಯೆ ಕೃಇ 75 ಕೃಪವಿ 2011</u>

<u>ಬೆಂಗಳೂರು , ದಿನಾಂಕ: 29ನೇ ಡಿಸೆಂಬರ 2011</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಬಿಜಾಪೂರ ಜಿಲ್ಲೆಯ ಕೃಷಿ ಇಲಾಖೆಯಲ್ಲಿ, ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ರೈತರಗೆ ಸಕಾಲದಲ್ಲಿ ಪರಿಕರಗಳನ್ನು ಪೂರೈಸುವಲ್ಲಿ ಮತ್ತು ದಾಖಲೆಗಳನ್ನು ನಿರ್ವಹಿಸುವಲ್ಲಿ ಲೋಪವೆಸಗಿರುವ ಈ ಕೆಳಕಂಡ ಅಧಿಕಾರಿಗಳನ್ನು ಅವರ ಮೇಲಿನ ಇಲಾಖಾ ವಿಚಾರಣೆ ಬಾಕಿಯಿರಿಸಿ ಈ ಕೂಡಲೇ ಜಾರಿಗ ಬರುವಂತಗೆ ಹಾಗೂ ಮುಂದಿನ ಆದೇಶದವರೆಗೆ ಕೆ.ಸಿ.ಎಸ್.(ಸಿ.ಸಿ.ಎ) ನಿಯಮಾವಳಿ 1957 ನಿಯಮ 10(1)(ಡಿ)ರನ್ವಯ ಅಮಾನತ್ತಿನಲ್ಲಿರಿಸಲಾಗಿದೆ.

(1) ಶ್ರೀ ಸಿ ಭೈರಪ್ಪ, ಜಂಟಿ ಕೃಷಿ ನಿರ್ದೇಶಕರು ಬಿಜಾಪುರ

(2) ಶ್ರೀ ದೇವೇಂದ್ರಪ್ಪ ಭಜಂತ್ರಿ ಸಹಾಯಕ ಕೃಷಿ ನಿರ್ದೇಶಕರು ಬಿಜಾಪೂರ

(3) ಶ್ರೀ ಸುರೇಶ ಡಿ. ಭಾವಿಕಟ್ಟಿ, ಕೃಷಿ ಅಧಿಕಾರಿ (ತಾಂತ್ರಿಕ ಅಧಿಕಾರಿ) ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಬಿಜಾಪುರ.

(4) ಶ್ರೀ ಎ.ಎ. ಭಾಗಾಯತ, ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ ತಿಕೋಟಾ

(5) ಶ್ರೀ ಬಿದರಿ ಕೃಷಿ ಅಧಿಕಾರಿ (ತಾಂತ್ರಿಕ ಸಹಾಯಕರು) ರೈತ ಸಂಪರ್ಕ ಕೇಂದ್ರ ತಿಕೋಟಾ,

ಮುಂದಿನ ಪುಟಕ್ಕೆ..

243



ಮೇಲ್ಕಂಡ ಅಧಿಕಾರಿ/ನೌಕರರುಗಳು ತಮ್ಮ ಅಮಾನತ್ತಿನ ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಹಾಗೂ ಸದರಿ ಅಧಿಕಾರಿಗಳು ಸಕ್ಷಮ ಪ್ರಾಧಿಕಾರದ ಅನುಮೋದನೆ ಇಲ್ಲದ ಕೇಂದ್ರ ಸ್ಥಾನವನ್ನು ಬಿಡುವಂತಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

29/12/11
(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು, (ಲೆಕ್ಕಪತ್ರ ಲೆಕ್ಕ ತಪಾಸಣೆ) ಕರ್ನಾಟಕ , ಬೆಂಗಳೂರು.
2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3) ಜಂಟಿ ಕೃಷಿ ನಿರ್ದೇಶಕರು ಬಿಜಾಪೂರ.
4) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
5) ಸರ್ಕರದ ಕಾರ್ಯದರ್ಶಿ, ಕೃಷಿ ಇಲಾಖೆಯವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
6) ಸರ್ಕಾರದ ಜಂಟಿ ಕಾರ್ಯದರ್ಶಿ, ಕೃಷಿ ಇಲಾಖೆ ಅವರ ಆಪ್ತ ಸಹಾಯಕರಿಗೆ.
(7) ಶ್ರೀ ಸಿ ಭೈರಪ್ಪ, ಜಂಟಿ ಕೃಷಿ ನಿರ್ದೇಶಕರು ಬಿಜಾಪುರ
(8) ಶ್ರೀ ದೇವೇಂದ್ರಪ್ಪ ಭಜಂತ್ರಿ ಸಹಾಯಕ ಕೃಷಿ ನಿರ್ದೇಶಕರು ಬಿಜಾಪೂರ
(9) ಶ್ರೀ ಸುರೇಶ ಡಿ. ಭಾವಿಕಟ್ಟಿ, ಕೃಷಿ ಅಧಿಕಾರಿ (ತಾಂತ್ರಿಕ ಅಧಿಕಾರಿ) ಸಹಾಯಕ ಕೃಷಿ ನಿರ್ದೇಶಕರ ಕಚೇರಿ ವಿಜಾಪುರ.
(10) ಶ್ರೀ ಎ.ಎ. ಭಾಗಾಯತ, ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ ತಿಕೋಟಾ
(11) ಶ್ರೀ ಬಿದರಿ ಕೃಷಿ ಅಧಿಕಾರಿ (ತಾಂತ್ರಿಕ ಸಹಾಯಕರು) ರೈತ ಸಂಪರ್ಕ ಕೇಂದ್ರ ತಿಕೋಟಾ,
(12 ) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು